ಮನೆಯೊಂದರಲ್ಲಿ ಬಿಡಾರ ಹೂಡಿದರು. ಜಾಣ ಹುಡುಗ ಸಿದ್ಧಲಿಂಗಯ್ಯ ಹೈಸ್ಕೂಲಿನಲ್ಲಿದ್ದಾಗಲೇ ತನ್ನ ಎಕ್ಸರ್‌ಸೈಸ್ ನೋಟ್ ಬುಕ್ಕಿನ ಒಳಗೆ ತನ್ನ ಸಿಟ್ಟು, ಅಸಹನೆ, ದುಗುಡಗಳನ್ನೆಲ್ಲ ಪದ್ಯಗಳ ರೂಪದಲ್ಲಿ ಗೀಚಿಡುತ್ತಿದ್ದ. ಒಮ್ಮೆ ಈ ಹುಡುಗನ ಚಿಕ್ಕಪ್ಪನ ಮಗ ಆ ಪದ್ಯಗಳನ್ನೆಲ್ಲ ನೋಡಿ ದಿಗಿಲುಗೊಂಡ. 'ಇಷ್ಟರಲ್ಲೇ ನಿನ್ನ ಮಗನ್ನ ಪೊಲೀಸೋರು ಇಡ್ಕಂಡೋಗ್ತರೆ' ಎಂದು ಈ ಪದ್ಯಗಳ ಪರಿಣಾಮದ ಬಗ್ಗೆ ದೇವಯ್ಯನವರನ್ನು ಹೆದರಿಸಿದ. ಹೆದರಿದ ದೇವಯ್ಯ ಆ ನೋಟ್ ಬುಕ್ಕನ್ನು ಒಲೆಗೆ ಹಾಕಿ ಮಗನನ್ನು ಪೊಲೀಸರಿಂದ ಬಚಾವು ಮಾಡಿದೆನೆಂದು ನೆಮ್ಮದಿಗೊಂಡರು. ಅಸಹಾಯಕ ಕವಿ ರೇಗಿ, ಗೊಣಗಿ ಸುಮ್ಮನಾದರೂ ಕವಿತೆ ಅವನ ಕೈ ಬಿಡಲಿಲ್ಲ.

ಹುಡುಗ ಸಿದ್ಧಲಿಂಗಯ್ಯ ಬರೆದ ಆರಂಭದ ಪದ್ಯಗಳು ಸುಟ್ಟು ಹೋದರೂ ಆ ಪದ್ಯಗಳಲ್ಲಿ ಚಿಮ್ಮುತ್ತಿದ್ದ ಭಾವ ಕವಿಪ್ರಜ್ಞೆಯನ್ನು ರೂಪಿಸುತ್ತಲೇ ಇತ್ತು. ಕಿಕ್ಕಿರಿದ ಪುಟ್ಟ ಮನೆಯಲ್ಲಿ ಎಷ್ಟೋ ಸಲ ನಿಲ್ಲಲು ಕೂಡ ಜಾಗವಿಲ್ಲದ ಕವಿ ಒಮ್ಮೆ ಸುಮ್ಮನೆ ನಡೆಯುತ್ತಾ ಹೋದಾಗ ಶ್ರೀರಾಂಪುರಕ್ಕೆ ಹೊಂದಿಕೊಂಡಿದ್ದ ಹರಿಶ್ಚಂದ್ರ ಸ್ಮಶಾನ ಕಾಣಿಸಿತು. ಅಂದಿನಿಂದ ಕವಿಗೆ ಸ್ಮಶಾನವೇ ಓದುವ, ಬರೆಯುವ, ತನ್ನ ಪಾಡಿಗೆ ತಾನು ಇರುವ ತಾಣವಾಯಿತು. ಹದಿಹರೆಯದಲ್ಲಿ ಭಾಷಣ ಮಾಡುವ ಕಲೆಯೂ ಕವಿಯಲ್ಲಿ ಬೆಳೆಯಿತು. ಮಂಟೇಸ್ವಾಮಿ ಒಕ್ಕಲಿನ ಕುಟುಂಬದ ಈ ಕವಿ ಅಂಬೇಡ್ಕರ್ ಬಗ್ಗೆ ಕಟ್ಟಿದ ಅರೆಸತ್ಯ–ಅರೆಕಲ್ಪನೆ ಬೆರೆತ ಕಥಾಪ್ರಸಂಗ ಸುತ್ತಮುತ್ತಲ ಕೇಳುಗರ ನಡುವೆ ಜನಪ್ರಿಯವಾಯಿತು. ಅಂಬೇಡ್ಕರ್ ಚಿಂತನೆಗಳನ್ನು ಅರಿಯುವ ಮೊದಲೇ ಅಂಬೇಡ್ಕರ್ ವ್ಯಕ್ತಿತ್ವ ಕವಿಯ ಭಾವಲೋಕದೊಳಗೆ ಇಳಿದಿತ್ತು. ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾದ ದಲಿತಪರ ಚಟುವಟಿಕೆಗಳು ಕೂಡ ಕವಿಯನ್ನು ಅಂಬೇಡ್ಕರ್ ಚಿಂತನೆಗಳತ್ತ ಕರೆದೊಯ್ದವು.

## ಕಾಲಘಟ್ಟ ರೂಪಿಸಿದ ಕವಿ ನಾಯಕ

ಡಾ. ಸಿದ್ಧಲಿಂಗಯ್ಯನವರು ಒಂದು ಕಾಲಘಟ್ಟದ ಹಲಬಗೆಯ ನಿರ್ಣಾಯಕ ವಿದ್ಯಮಾನಗಳ ಫಲವಾಗಿ ವಿಕಾಸಗೊಂಡು ತಾವೇ ಒಂದು ಅಪೂರ್ವ ವಿದ್ಯಮಾನವಾದ ಕವಿ. ಇಂಥ ಕವಿಯನ್ನು ವ್ಯಕ್ತಿಪ್ರತಿಭೆಯಾಗಿ ನೋಡುವುದರ ಜೊತೆಗೇ, ಈ ಕವಿಯನ್ನು ಸೃಷ್ಟಿಸಿದ ಕಾಲಘಟ್ಟ, ವೈಚಾರಿಕ, ರಾಜಕೀಯ, ಸಾಮಾಜಿಕ ಪರಿಸರ, ಸಾಹಿತ್ಯಿಕ, ಸಾಂಸ್ಕೃತಿಕ ವಾತಾವರಣಗಳ ಹಿನ್ನೆಲೆಯಲ್ಲಿ ನೋಡಿದರೆ ಹಲವು ಸತ್ಯಗಳು ಕಾಣುತ್ತವೆ: ಎಪ್ಪತ್ತರ ದಶಕದ ಶುರುವಿನಲ್ಲಿ ಕಾಂಗ್ರೆಸ್ ರಾಜಕಾರಣ ಯಥಾಸ್ಥಿತಿವಾದಿಯಾಗಿ ಬಸವಳಿಯುತ್ತಿತ್ತು. ಆದರೆ, ಕಾಂಗ್ರೆಸ್ಸಿನ ಕಾರ್ಯಕ್ರಮಗಳಿಂದಾಗಿ ಶೂದ್ರ, ದಲಿತ ತಲೆಮಾರುಗಳು ಹೊಸ ಶಿಕ್ಷಣವನ್ನೂ ಪಡೆಯುತ್ತಿದ್ದವು. ಪುರೋಹಿತಶಾಹಿಯನ್ನು, ಜಮೀನ್ದಾರಿಕೆಯನ್ನು, ಅಸ್ಪೃಶ್ಯತೆಯನ್ನು ಪ್ರಶ್ನಿಸಬಲ್ಲ ಹೊಸ ಹುಡುಗರು ಸಿದ್ಧವಾಗುತ್ತಿದ್ದರು. ಅದೇ ಆಗ ವಕೀಲರಾಗಿ, ಹರಿಹರದ ಹಳ್ಳಿಹಳ್ಳಿಗಳಿಗೆ ಸೈಕಲ್ಲಿನಲ್ಲಿ ಹೋಗಿ ದಲಿತರಲ್ಲಿ ಎಚ್ಚರ ಮೂಡಿಸುತ್ತಿದ್ದ ಬಿ. ಬಸವಲಿಂಗಪ್ಪ ರಾಜಕೀಯ ಪ್ರವೇಶಿಸಿದ್ದರು; ಅವರೆಗಿನ ವಿನಮ್ರ ದಲಿತ ರಾಜಕಾರಣದ ಭಾಷೆಗಿಂತ ಭಿನ್ನವಾದ ಸ್ವಾಭಿಮಾನದ ಭಾಷೆಯನ್ನು ಬಳಸಲಾರಂಭಿಸಿದ್ದರು; ದಲಿತ ಸಮುದಾಯಕ್ಕೆ ಛಲ, ಘನತೆ, ದಿಟ್ಟತನಗಳ ಹಾದಿ ತೋರಿಸುತ್ತಿದ್ದರು.

ಇತ್ತ ಸಾಹಿತ್ಯಲೋಕದಲ್ಲಿ ನವ್ಯ ಲೇಖಕರಾಗಿ ಬರೆಯಲು ಶುರು ಮಾಡಿದ್ದ ಲಂಕೇಶ್, ತೇಜಸ್ವಿ, ಚಂದ್ರಶೇಖರ ಪಾಟೀಲ, ಶ್ರೀಕೃಷ್ಣ ಆಲನಹಳ್ಳಿ ಥರದವರು ನವ್ಯ ಮಾರ್ಗ ತೊರೆದು ಶೂದ್ರ ಬರಹಗಾರರ ಒಕ್ಕೂಟವನ್ನು ರೂಪಿಸಿಕೊಂಡಿದ್ದರು. ಅಷ್ಟು ಹೊತ್ತಿಗಾಗಲೇ ಹಾಸ್ಟೆಲ್ ಸೇರಿದ್ದ ಸಿದ್ಧಲಿಂಗಯ್ಯ ದಲಿತ ವಿದ್ಯಾರ್ಥಿಗಳ ಪ್ರತಿಭಟನೆಯ ನೇತೃತ್ವ ವಹಿಸಿ ನಾಯಕರಾಗಿದ್ದರು. ವಿಧಾನಸೌಧದ ಗ್ಯಾಲರಿಯಿಂದ ಕರಪತ್ರ ತೂರಿದ್ದರು. ಬಿ.ಎ. ಆನರ್ಸ್ ಮಾಡುವ ಕಾಲಕ್ಕೆ ಸ್ಪಷ್ಟ